# ಮನಸ್ಸಿದ್ದರೆ ಮಾರ್ಗ

ಯಾವುದೇ ಸಾಧನೆಯನ್ನು ಸಾಧಿಸಬೇಕಾದರೆ ಮನಸ್ಸು ಬೇಕು. ಸಾಧಿಸುತ್ತೇನೆ ಎಂಬ ಛಲವು ಇರಬೇಕು. ಆಗ ಪ್ರಯತ್ನದ ಹಾದಿ ತೋರುತ್ತದೆ. ಒಂದು ಚಿತ್ರಗೀತೆಯ ಸಾಲು ಹೀಗಿದೆ. "ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ". ನನ್ನ ಕೈಯಲ್ಲಿ ಆಗುವದಿಲ್ಲ ಎಂದು ಯೋಚಿಸುವುದರಿಂದ ಯಾವ ಕೆಲಸವೂ ಸಾಧ್ಯವಿಲ್ಲ. ಮಾಡಬಲ್ಲೆ ಎಂಬ ಮನಸ್ಸು ಮಾಡುವವನು ಎಂತ ಕೆಲಸವನ್ನಾದರೂ ಮಾಡಬಲ್ಲ. ಅಸಾಧ್ಯ ಎನ್ನುವ ಪದವನ್ನು ತೆಗೆದುಹಾಕಿ ಎಂದು ನೆಪೋಲಿಯನ್ ಬೋನಾಪಾರ್ಟೆ ಹೇಳುತ್ತಿದ್ದನಂತೆ. ಉದ್ದೇಶ ದೊಡ್ಡದಾಗಿರಬೇಕು. ಗುರಿಯನ್ನು ಸಾಧಿಸುವ ಮನಸ್ಸು ಇರಬೇಕು. ಪ್ರಯತ್ನ ಪಡಬೇಕು. ಗೌರಿಶಂಕರ ಶಿಖರವನ್ನೇ ಏರಬೇಕೆಂಬ ಗುರಿ ಇರಿಸಿಕೊಂಡು ಪ್ರತಿದಿನ ಚಿಕ್ಕ ಬೆಟ್ಟ ಹತ್ತಿ ಪ್ರಯತ್ನಿಸಿದರೆ ಕೊನೆಗೊಂದು ದಿನ ಗೌರಿ ಶಿಖರವನ್ನು ಏರಬಹುದು. ಇದಕ್ಕೆ ಉದಾಹರಣೆ ಛಲಬಿಡದ ತೇನ್ ಸಿಂಗ್. ಅವರು ಎವರೆಸ್ಟ್ ಶಿಖರವನ್ನು ಏರಿ ತಮ್ಮ ಮನಸ್ಸಿನಲ್ಲಿರುವ ಮಾರ್ಗವನ್ನು ತಮ್ಮ ಪ್ರಯತ್ನದಿಂದಲೇ ಸಾಧಿಸಿದರು. ವಿದ್ಯಾರ್ಥಿಯಾದವನು ಯಶಸ್ಸು ಗಳಿಸಲು ಮನಸ್ಸು ಮಾಡಬೇಕು. ಪ್ರಯತ್ನ ಪಡಬೇಕು. ಮನಸ್ಸಿಟ್ಟು ಪ್ರಯತ್ನಿಸಿದರೆ ಎಲ್ಲವೂ ಸಾಧ್ಯ. ಮನಸ್ಸಿದ್ದರೆ ಮಾರ್ಗ ಕನ್ನಡದ ಗಾದೆ ಮಾತು

FOR KANNADA
ಕನ್ನಡದೀಪ್ತಿ